# ಶ್ರೀರಾಮಕೃಷ್ಣ ಲೀಲಾಸ್ಥಾನಗಳ ಸಚಿತ್ರ ಯಾತ್ರೆ

## ದಕ್ಷಿಣೇಶ್ವರ



ದಕ್ಷಿಣೇಶ್ವರ ಕಾಳೀ ಮಂದಿರದ ಗರ್ಭಗುಡಿಯ ಗೋಪುರ ಮತ್ತು ನಾಟ್ಯಮಂದಿರದ ದೃಶ್ಯ



ಗೋಪುರದ ಪಕ್ಕದಲ್ಲಿ ರಾಧಾಕಾಂತ ದೇವಸ್ಥಾನ ಇದೆ (ಇಲ್ಲಿನ ವಿಗ್ರಹದ ಕಾಲು ಮುರಿದಾಗ ಶ್ರೀರಾಮಕೃಷ್ಣರು ಅದನ್ನು ಸರಿಪಡಿಸಿದ್ದರು)



**ನಹಬತ್ ಖಾನಾ**

ಇಲ್ಲಿನ ಉಪ್ಪರಿಗೆಯಲ್ಲಿ ಉತ್ಸವದ ಸಮಯದಲ್ಲಿ ವಾದ್ಯಗಳನ್ನು ನುಡಿಸುತ್ತಿದ್ದರು. ಇಲ್ಲಿ ಶ್ರೀರಾಮಕೃಷ್ಣರ ತಾಯಿ ಚಂದ್ರಮಣೀ ದೇವಿ ಮತ್ತು ಶ್ರೀಮಾತೆ ಶಾರದಾ ದೇವಿಯವರು ವಾಸಿಸುತ್ತಿದ್ದರು.

ಶ್ರೀಮಾತೆಯವರು ಕೆಳಗಿನ ಅತಿ ಚಿಕ್ಕ ಕೊಠಡಿಯಲ್ಲಿ ಇಡೀ ದಿನ ಕಳೆಯುತ್ತಿದ್ದರು. ಅಡುಗೆಯ ಪದಾರ್ಥಗಳನ್ನು ಇಡುವ ಸ್ಥಳ, ಅವರು ಧ್ಯಾನ ಮಾಡುವ ಸ್ಥಳ ಮತ್ತು ಮಲಗುವ ಕೋಣೆಯೂ ಇದೇ ಆಗಿತ್ತು. ಇಲ್ಲಿದ್ದುಕೊಂಡು ಶ್ರದ್ಧಾಭಕ್ತಿಗಳಿಂದ ಶ್ರೀಮಾತೆಯವರು ಶ್ರೀರಾಮಕೃಷ್ಣರ ಸೇವೆ ಮಾಡಿದರು. ಹಾಗೆಯೇ ಇಲ್ಲಿಯೇ ತಮ್ಮ ಆಧ್ಯಾತ್ಮಿಕ ಸಾಧನೆಯನ್ನೂ ತೀವ್ರವಾಗಿ ನಡೆಸಿದರು.

**ಶ್ರೀರಾಮಕೃಷ್ಣರ ಕೊಠಡಿ**

ಶ್ರೀರಾಮಕೃಷ್ಣರು ಈ ಕೊಠಡಿಯಲ್ಲಿ ಹಲವಾರು ವರ್ಷಗಳ ಕಾಲ ವಾಸವಾಗಿದ್ದರು. ಇಲ್ಲಿನ ದೊಡ್ಡ ಮಂಚದಲ್ಲಿ ಮಲಗುತ್ತಿದ್ದರು ಮತ್ತು ಚಿಕ್ಕ ಮಂಚದ ಮೇಲೆ ಕುಳಿತು ಬಂದ ಭಕ್ತರೊಡನೆ ಮಾತುಕತೆಯಾಡುತ್ತಿದ್ದರು. ಗೋಡೆಯ ಮೇಲೆ ಅನೇಕ ದೇವದೇವತೆಗಳ ಚಿತ್ರಪಟಗಳಿದ್ದವು.

ಹಲವಾರು ಗಂಟೆಗಳ ಕಾಲ ಭಕ್ತರು ಶ್ರೀರಾಮಕೃಷ್ಣರ ಉಪದೇಶಾಮೃತವನ್ನು ಕೇಳಲು ಇಲ್ಲಿ ನೆರೆಯುತ್ತಿದ್ದರು. ದೇವರ ಕುರಿತು ಮಾತನಾಡುತ್ತ ಶ್ರೀರಾಮಕೃಷ್ಣರು ಸಮಾಧಿ ಸ್ಥಿತಿಗೆ ಹೋಗುತ್ತಿದ್ದರು ಮತ್ತು ಆ ಆನಂದದ ಸ್ಥಿತಿಯಲ್ಲಿ ಕಾಲ ಕಳೆಯುತ್ತಿದ್ದರು.

